# ಪ್ರತಿಭೆ ಮುತು



**ಕ್ರೀಡೆಯ ಹುರುಪು, ರಂಗಭೂಮಿಯ ಪಾಠ ಇವೆರಡನ್ನೂ ನಟನೆಯಲ್ಲಿ ಒಂದಾಗಿಸಿ ಸಿನಿರಂಗದಲ್ಲಿ ಪ್ರಯೋಗಾತ್ಮಕ ಪಾತ್ರಗಳಿಗೆ ತೆರೆದುಕೊಂಡವರು ನಟಿ ಗ್ರೀಷ್ಮಾ ಶ್ರೀಧರ್!**

**■ ಸುಮಲತಾ ಎನ್!**

‘ನಾನು ಕುಸುಮ’ ಹಾಗೂ ‘ಲಚ್ಚಿ’... ರಾಷ್ಟ್ರೀಯ, ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಹೆಸರು, ಪ್ರಶಸ್ತಿ ಪಡೆದಿರುವ ಸಿನಿಮಾಗಳು. ಕೃಷ್ಣೇಗೌಡರ ನಿರ್ದೇಶನದ ಈ ಸಿನಿಮಾಗಳು ವಾಸ್ತವಿಕತೆಗೆ ಕನ್ನಡಿ ಹಿಡಿದ ಚಿತ್ರಗಳೆನ್ನುವುದು ಒಂದು ವಿಶೇಷವಾದರೆ, ಮಹಿಳಾ ಪ್ರಧಾನ ಎನ್ನುವುದು ಮತ್ತೊಂದು ವಿಶೇಷ. ಇದರೊಂದಿಗೆ, ಈ ಎರಡೂ ಸಿನಿಮಾಗಳ ನಾಯಕಿ ಗ್ರೀಷ್ಮಾ ಶ್ರೀಧರ್ ಎನ್ನುವುದು ಗಮನಾರ್ಹ ಸಂಗತಿ.

ಕನ್ನಡದ ‘ನಾತಿಚರಾಮಿ’ ಸಿನಿಮಾ ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟ ಗ್ರೀಷ್ಮಾ, ಬೆಂಗಳೂರಿನ ಹುಡುಗಿ. ಹುಟ್ಟಿ ಬೆಳೆದಿದ್ದು ಬೆಂಗಳೂರಾದರೂ ರಾಷ್ಟ್ರೀಯ ಮಟ್ಟದ ಈಜುಪಟುವೂ ಆಗಿದ್ದರಿಂದ ಹಲವು ರಾಜ್ಯಗಳನ್ನು ಸುತ್ತಿ ಬಂದರು. ಕ್ರೀಡಾಸಕ್ತಿಯ ನಡುವೆಯೇ ನಟನೆ ಬಗ್ಗೆ ಆಕರ್ಷಣೆಯನ್ನೂ ಬೆಳೆಸಿಕೊಂಡಿದ್ದರು.

‘ನಾನು ಈಜುಪಟು ಆಗಿದ್ದೆ. ರಾಷ್ಟ್ರೀಯ ಮಟ್ಟದಲ್ಲಿಯೂ ಗುರುತಿಸಿಕೊಂಡೆ. ಆದರೆ ಪಿಯುಸಿ ಬರುವ ಹೊತ್ತಿಗೆ ನಟನೆ ಬಗ್ಗೆ ಆಸಕ್ತಿ ಚಿಗುರಿತು. ಶಾಲಾ ಕಾರ್ಯಕ್ರಮಗಳಲ್ಲಿ ನರೇಟರ್ ಆಗಿರುತ್ತಿದ್ದೆ. ಭರತನಾಟ್ಯಂ ಕಲಿತಿದ್ದರಿಂದ ಕಾಲೇಜಿನಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದೆ. ಬಹುಶಃ ಆ ವೇದಿಕೆ, ಚಪ್ಪಾಳೆ ನನ್ನೊಳಗೆ ಉತ್ಸಾಹ ತುಂಬಿರಬಹುದು. ಅದೇ ನನ್ನನ್ನು ನಟನೆಯೆಡೆಗೆ ಪ್ರೇರೇಪಿಸಿರಬಹುದು’ ಎಂದು ನೆನಪಿಸಿಕೊಂಡು ನಗುತ್ತಾರೆ ಗ್ರೀಷ್ಮಾ.

ನಟನೆಯೆಡೆಗೆ ಒಲವು ಬೆಳೆಯುತ್ತಿದ್ದಂತೆ ಪಿಯುಸಿಯಲ್ಲಿ ಪರ್ಫಾರ್ಮಿಂಗ್ ಆರ್ಟ್ಸ್ ಸೇರಿದ ಅವರು, ಪದವಿಯಲ್ಲಿಯೂ ರಂಗಭೂಮಿ ವಿಷಯದಲ್ಲಿ ಓದು ಮುಂದುವರೆಸಿದರು. ನಟನೆಯಲ್ಲಿ ಪಕ್ಕಾ ತರಬೇತಿಯನ್ನು ಪಡೆಯಲೆಂದು ಮುಂಬೈನಲ್ಲಿ ಡಿಪ್ಲೊಮಾ ಕೋರ್ಸ್ ಸೇರಿದರು. ಈ ನಡುವೆ ರಂಗಭೂಮಿಯಲ್ಲಿ ಸಹ ಸಕ್ರಿಯರಾಗಿದ್ದ ಅವರಿಗೆ ಕೆಲವು ಜಾಹೀರಾತಿನಲ್ಲಿ ಅಭಿನಯಿಸುವ ಅವಕಾಶಗಳು ತೆರೆದುಕೊಂಡವು.

ರಂಗಭೂಮಿಯ ನಂಟು ಅವರಲ್ಲಿ ಗಟ್ಟಿತನವನ್ನು ತುಂಬಿತ್ತು. ಹಿಂದಿ, ಇಂಗ್ಲಿಷ್ ರಂಗಭೂಮಿಯಲ್ಲಿ ಸಾಕಷ್ಟು ಪ್ರಯೋಗಗಳಿಗೆ ತೆರೆದುಕೊಂಡು ಆತ್ಮವಿಶ್ವಾಸವನ್ನೂ ಹೆಚ್ಚಿಸಿಕೊಂಡರು.

ಈ ನಡುವೆ ‘ನಾತಿಚರಾಮಿ’ ಸಿನಿಮಾದ ಪಾತ್ರವೊಂದಕ್ಕೆ ನಿರ್ದೇಶಕ ಮಂಸೋರೆ ಅವರು ಆಡಿಷನ್ ಕರೆದಿರುವ ವಿಚಾರ ತಿಳಿದು ಅರ್ಜಿ ಸಲ್ಲಿಸಿದ ಗ್ರೀಷ್ಮಾಗೆ ಸಿನಿಮಾದಲ್ಲಿ ನಟಿಸುವ ಅವಕಾಶ ಒಲಿದು ಬಂತು. ಅದಾದ ನಂತರ ನಟ ವಿಜಯ ರಾಘವೇಂದ್ರ ಜೊತೆ ‘ಮಾಲ್ಗುಡಿ ಡೇಸ್’ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ್ದು ಅವರಿಗೆ ಸಿನಿಮಾರಂಗದ ಬಗ್ಗೆ ಭರವಸೆ ಮೂಡಿಸಿತ್ತು. ರಿಷಿ ಅಭಿನಯದ ‘ನೋಡಿ ಸ್ವಾಮಿ ಇವನು ಇರೋದೆ ಹೀಗೆ’ ಸಿನಿಮಾಗೂ ಬಣ್ಣ ಹಚ್ಚಿದರು ಗ್ರೀಷ್ಮಾ.

‘ನಾನು ಕುಸುಮ’ ಸಿನಿಮಾದಲ್ಲಿ ನರ್ಸ್ ಪಾತ್ರದಲ್ಲಿ ಕಾಣಿಸಿಕೊಂಡದ್ದು ಗ್ರೀಷ್ಮಾ ಅವರಿಗೆ ಹೆಸರು ತಂದುಕೊಟ್ಟಿತು. ನೈಜ ಘಟನೆಯಿಂದ ಸ್ಫೂರ್ತಿ ಪಡೆದು ರೂಪಿಸಿದ ಈ ಸಿನಿಮಾ, ಆಸ್ಪತ್ರೆಯ ಅವ್ಯವಹಾರಕ್ಕೆ ಸಂಬಂಧಿಸಿದ್ದಾಗಿದ್ದು, ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಹೆಸರು ಗಳಿಸಿತು. ಮಾತ್ರವಲ್ಲ, ಫ್ರಾನ್ಸ್ ಪ್ಯಾರಿಸ್ ಚಲನಚಿತ್ರೋತ್ಸವ **‘Gange Sur Garonne International Film Festival’**ನಲ್ಲಿ ‘ಅತ್ಯುತ್ತಮ ನಟಿ’ ಪ್ರಶಸ್ತಿ ಗ್ರೀಷ್ಮಾ ಅವರಿಗೆ ಒಲಿಯಿತು.

ಮುಂದೆ ಅದೇ ತಂಡ ‘ಲಚ್ಚಿ’ ಸಿನಿಮಾ ರೂಪಿಸಿತು. ಮಕ್ಕಳ ಕಳ್ಳಸಾಗಣೆ ಬಗೆಗಿನ ಈ ಸಿನಿಮಾ ಹಲವು ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಮನ್ನಣೆ ಪಡೆಯಿತು. ಈಚೆಗೆ ಈ ಚಿತ್ರಕ್ಕೆ ಕೋಲ್ಕತ್ತ ಅಂತರರಾಷ್ಟ್ರೀಯ ಚಿತ್ರೋತ್ಸವದ, ಭಾರತೀಯ ಭಾಷಾ ಚಿತ್ರಗಳ ವಿಭಾಗದಲ್ಲಿ ‘ಅತ್ಯುತ್ತಮ ಚಿತ್ರ’ ಪ್ರಶಸ್ತಿ ಪಡೆದುಕೊಂಡಿತು. ಗ್ರೀಷ್ಮಾ ಅಭಿನಯಿಸಿರುವ ಮತ್ತೊಂದು ಚಿತ್ರ ‘ನನ್ ಆಫ್ ಹರ್’ ಎಂಬ ಸಿನಿಮಾ ಕೂಡ ಚೆನ್ನೈ ಅಂತರರಾಷ್ಟ್ರೀಯ ಚಿತ್ರೋತ್ಸವ, ಮುಂಬೈ ಚಿತ್ರೋತ್ಸವದಲ್ಲಿ ತೆರೆಕಂಡಿದೆ.

ಇದೇ ಸಂದರ್ಭ ಕಮರ್ಷಿಯಲ್–ಕಂಟೆಂಟ್ ಸಿನಿಮಾಗಳ ಬಗ್ಗೆ ಮಾತನಾಡಿದ ಅವರು, ‘ನಾನು ಕಮರ್ಷಿಯಲ್–ಕಂಟೆಂಟ್ ಬೇರೆ ಬೇರೆ ಎಂದು ನೋಡುವುದಿಲ್ಲ. ನನ್ನ ಪಾತ್ರ ಎಷ್ಟು ಚೆನ್ನಾಗಿದೆ, ತಂಡ ಹೇಗಿದೆ ನೋಡುತ್ತೇನೆ. ಕಥೆ ಆಸಕ್ತಿದಾಯಕ ಎನಿಸಿದರೆ ಮಾಡುತ್ತೇನೆ. ಸಹಜತೆಯೇ ನಟನೆಯ ಜೀವಾಳ ಎಂದು ನಂಬಿದ್ದೇನೆ’ ಎನ್ನುತ್ತಾರೆ.

ಐತಿಹಾಸಿಕ– ಚಾರಿತ್ರಿಕ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕೆನ್ನುವ ಹಂಬಲ ಹೊಂದಿರುವ ಗ್ರೀಷ್ಮಾ, ಸದ್ಯ ಕನ್ನಡ ಸಿನಿಮಾವೊಂದರಲ್ಲಿ ನಟಿಸುತ್ತಿದ್ದಾರೆ. ಹಿಂದಿ ಒಟಿಟಿ ವೆಬ್ ಸೀರೀಸ್‌ನಲ್ಲಿಯೂ ತೊಡಗಿಕೊಂಡಿದ್ದಾರೆ. ■